# ಅಭಿಜಿತ್‌ಗೆ ನೊಬೆಲ್

ಭಾರತದ ಮುಡಿಗೆ ಮತ್ತೊಂದು ನೊಬೆಲ್ ಪ್ರಶಸ್ತಿ ಏರಿದೆ. ಕೋಲ್ಕತ್ತದ ಅಭಿಜಿತ್ ವಿನಾಯಕ್ ಬ್ಯಾನರ್ಜಿ 2019ರ ಸಾಲಿಗೆ 'ಎಕನಾಮಿಕ್ ಸೈನ್ಸಸ್' ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಗೆದ್ದಿದ್ದಾರೆ. 58ರ ಹರೆಯದಲ್ಲಿ (ಬರ್ತ್‌ಡೇ 21/2/1961) ನೊಬೆಲ್ ಗೆಲ್ಲುವುದು ಅಸಾಧಾರಣ ಸಾಧನೆಯೇ. ಆದರೆ ಇದು ಏಕಾಂಗಿ ಗೆಲುವಲ್ಲ; ಪತ್ನಿ ಎಸ್ತರ್ ಡಫ್ಲೊ ಮತ್ತು ಮೈಕೆಲ್ ಕ್ರೆಮರ್ ಜೊತೆಗೂಡಿ ಅಭಿಜಿತ್ ನೊಬೆಲ್ ಪಡೆದಿದ್ದಾರೆ. ಪತಿ–ಪತ್ನಿ ಇಬ್ಬರೂ ಅರ್ಥಶಾಸ್ತ್ರಜ್ಞರು. ಅಮೆರಿಕದ ಮೆಸಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಎಂಐಟಿ) ಪ್ರೊಫೆಸರ್‌ಗಳು. ಪತ್ನಿ ಮತ್ತು ಸೆಂಥಿಲ್ ಮುಲ್ಲೈನಾಥನ್ ಜೊತೆಗೂಡಿ ಅಭಿಜಿತ್ ಸ್ಥಾಪಿಸಿರುವ "Abdul latheef jameel poverty action lab" ಜಾಗತಿಕ ಬಡತನಕ್ಕೆ ಸಂಬಂಧಿಸಿ ಅಧ್ಯಯನ ನಡೆಸುತ್ತಿದೆ. 'ಜಾಗತಿಕ ಬಡತನ ನಿವಾರಣೆಯತ್ತ ಪ್ರಾಯೋಗಿಕ ಅನುಸಂಧಾನ' ನಡೆಸಿದ್ದಕ್ಕಾಗಿ ಈ ನೊಬೆಲ್ ಪ್ರಶಸ್ತಿ ಲಭಿಸಿದೆ. ಗಂಡ–ಹೆಂಡತಿ ಜೋಡಿಯೊಂದು ಜಂಟಿಯಾಗಿ ನೊಬೆಲ್ ಪ್ರಶಸ್ತಿ ಗೆದ್ದಿರುವುದು ಇದು ಆರನೇ ಬಾರಿ. ಈ ಹಿಂದೆ ಇದೇ ರೀತಿ ಗಂಡ–ಹೆಂಡತಿಯರ ಐದು ಜೋಡಿ ನೊಬೆಲ್ ಪ್ರಶಸ್ತಿ ಗೆದ್ದಿದೆ.

'ಸಿಟಿ ಆಫ್ ಜಾಯ್' ಕೋಲ್ಕತ್ತಕ್ಕೆ ಇದು ಹೆಮ್ಮೆಯ ಸಂಗತಿ. ಭಾರತದ ಎಂಟು ನೊಬೆಲ್ ವಿಜೇತರಲ್ಲಿ ನಾಲ್ಕು ಮಂದಿ ಕೋಲ್ಕತ್ತದವರು. ರವೀಂದ್ರನಾಥ ಠ್ಯಾಗೋರ್ (ಸಾಹಿತ್ಯ), ಮದರ್ ಥೆರೆಸಾ (ಶಾಂತಿ), ಅಮರ್ತ್ಯ ಸೇನ್ ಮತ್ತು ಅಭಿಜಿತ್ ಬ್ಯಾನರ್ಜಿ (ಇಬ್ಬರೂ ಅರ್ಥಶಾಸ್ತ್ರ). ಭಾರತಕ್ಕೆ ನೊಬೆಲ್ ಪ್ರಶಸ್ತಿ ತಂದುಕೊಟ್ಟ ಇನ್ನೂ ಇಬ್ಬರು ಸಿ.ವಿ.ರಾಮನ್ ಮತ್ತು ರೊನಾಲ್ಡ್ ರಾಸ್. ಭೌತಶಾಸ್ತ್ರಜ್ಞ ರಾಮನ್, ತಮ್ಮ ಪ್ರಸಿದ್ಧ 'ರಾಮನ್ ಎಫೆಕ್ಟ್'ಅನ್ನು ಕೋಲ್ಕತ್ತಾ ಯುನಿವರ್ಸಿಟಿಯಲ್ಲಿ ಪ್ರೊಫೆಸರ್ ಆಗಿದ್ದಾಗಲೇ ಕಂಡು ಹಿಡಿದದ್ದು. ಹಾಗೆಯೇ ವೈದ್ಯಕೀಯ ಸಂಶೋಧಕ ರೊನಾಲ್ಡ್ ರಾಸ್, ಮಲೇರಿಯಾ ಹರಡುವುದರ ಕುರಿತು ನಡೆಸಿದ ಸಂಶೋಧನೆ ಕೋಲ್ಕತ್ತದ ಪ್ರೆಸಿಡೆನ್ಸಿ ಜನರಲ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ್ದಾಗ ಮಾಡಿದ್ದು.

ಅಭಿಜಿತ್ ಅಪ್ಪ ಮತ್ತು ಅಮ್ಮ ಕೂಡಾ ಅರ್ಥಶಾಸ್ತ್ರಜ್ಞರು. ಬಾಲ್ಯದಲ್ಲಿ ಸಮೀಪದ ಕೊಳೆಗೇರಿ ಮಕ್ಕಳ ಜೊತೆಗೂಡಿ ಆಟವಾಡುತ್ತಿದ್ದ ಅಭಿಜಿತ್, ಮನೆಯಲ್ಲಿ ಅಪ್ಪ–ಅಮ್ಮ ಪೇರಿಸಿಟ್ಟಿದ್ದ ಅರ್ಥಶಾಸ್ತ್ರದ ಪುಸ್ತಕಗಳನ್ನು ಓದುತ್ತಲೇ ಬೆಳೆದವರು. ಅಭಿವೃದ್ಧಿ ಆರ್ಥಿಕತೆಯ, ಥಿಯರಿ ಮತ್ತು ಪ್ರಾಕ್ಟಿಕಲ್ ಎರಡನ್ನೂ ಗಮನಿಸುವುದಕ್ಕೆ ಈ ಬಾಲ್ಯ ನೆರವಾಗಿದೆ.

ಅಭಿಜಿತ್ ಎಕನಾಮಿಕ್ಸ್ ಎಂ.ಎ ಮಾಡಿದ್ದು (1983) ದೆಹಲಿಯ ಜವಾಹರಲಾಲ್ ನೆಹರೂ ಯುನಿವರ್ಸಿಟಿಯಲ್ಲಿ. ಈತ ಜೆಎನ್‌ಯುನಲ್ಲಿ ಕಲಿಯುತ್ತಿದ್ದಾಗ, ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಎಂಫಿಲ್ ಮಾಡುತ್ತಿದ್ದ ನಿರ್ಮಲಾ ಸೀತಾರಾಮನ್ (ಈಗಿನ ಹಣಕಾಸು ಸಚಿವೆ) ಒಂದು ವರ್ಷ ಜ್ಯೂನಿಯರ್. ಆಗಲೂ ಜೆಎನ್‌ಯುನಲ್ಲಿ ಎಡಪಂಥೀಯ ಒಲವುಳ್ಳ ವಿದ್ಯಾರ್ಥಿಗಳದ್ದೇ ಮೇಲುಗೈ. ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷನನ್ನು ಯುನಿವರ್ಸಿಟಿ ಅಮಾನತು ಮಾಡಿದ್ದನ್ನು ಪ್ರತಿಭಟಿಸಿ ಆಗ ನೂರಾರು ವಿದ್ಯಾರ್ಥಿಗಳು ವಿ.ಸಿ. ಮನೆಗೆ ಮುತ್ತಿಗೆ ಹಾಕಿದರು. ದೆಹಲಿಯಲ್ಲಿ ಇದ್ದದ್ದು ಕಾಂಗ್ರೆಸ್ ಸರ್ಕಾರ. ವಿದ್ಯಾರ್ಥಿಗಳನ್ನೆಲ್ಲ ಬಂಧಿಸಿ ತಿಹಾರ್ ಜೈಲಿಗೆ ತಳ್ಳಲಾಯಿತು. ಅಭಿಜಿತ್ ಕೂಡಾ ಬಂಧನಕ್ಕೆ ಒಳಗಾಗಿ ಹತ್ತು ದಿನ ಜೈಲಿನಲ್ಲಿದ್ದರು. 'ಜೈಲಲ್ಲಿ ಪೊಲೀಸರು ಚೆನ್ನಾಗಿ ಒದ್ದಿದ್ದರು' ಎನ್ನುವುದು ಅಭಿಜಿತ್ ಹಳೆಯ ನೆನಪು!

ಇಡೀ ಜಗತ್ತು ಅಭಿಜಿತ್‌ನ ಅರ್ಥಶಾಸ್ತ್ರದ ಕೊಡುಗೆಯನ್ನು ಶ್ಲಾಘಿಸುತ್ತಿದ್ದರೆ, ಕೇಂದ್ರ ಬಿಜೆಪಿ ಸರ್ಕಾರದ ಸಚಿವರೊಬ್ಬರು ಲೇವಡಿ ಮಾಡಿದ್ದಾರೆ. 'ಈತನ ಅರ್ಥಶಾಸ್ತ್ರದ ಪರಿಕಲ್ಪನೆಗಳು ಭಾರತದಲ್ಲಿ ವಿಫಲವಾಗಿದೆ' ಎಂದಿದ್ದಾರೆ! ಅದಕ್ಕೆ ಕಾರಣ, ಕಾಂಗ್ರೆಸ್ ಕಳೆದ ಲೋಕಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಕಟಿಸಿದ 'ನ್ಯಾಯ್' ಪರಿಕಲ್ಪನೆಗೆ ಬೇಕಾದ ಅಂಕಿ ಅಂಶಗಳನ್ನು ಒದಗಿಸಿದ್ದು ಇದೇ ಅಭಿಜಿತ್ ಬ್ಯಾನರ್ಜಿ. ಈ ಹಿಂದೆ ಬ್ಯಾನರ್ಜಿಯ ಗುರು ಅಮರ್ತ್ಯ ಸೇನ್ ಮತ್ತು ಆರ್‌ಬಿಐ ಗವರ್ನರ್ ಆಗಿದ್ದ ರಘುರಾಮ ರಾಜನ್ ಬಗ್ಗೆಯೂ ಹೀಗೆಯೇ ಟೀಕೆ ಮಾಡಲಾಗಿತ್ತು. ಬಿಜೆಪಿ ಸರ್ಕಾರದ ಆರ್ಥಿಕ ನೀತಿ ಸರಿಯಿಲ್ಲ ಎಂದು ಟೀಕಿಸಿದ್ದು ಈ ಮೂವರೂ ಮಾಡಿರುವ ಸಮಾನ ತಪ್ಪು! ನಮ್ಮಲ್ಲಿ ಅರ್ಥಶಾಸ್ತ್ರಜ್ಞರು ಸತ್ಯ ಹೇಳಿದರೆ ಅಧಿಕಾರಸ್ಥರ ಅವಕೃಪೆಗೆ ಗುರಿಯಾಗುತ್ತಾರೆ ಎನ್ನುವುದು ಅಭಿಜಿತ್ ವಿಷಯದಲ್ಲೂ ನಿಜವಾಗಿದೆ.

ಅಮೆರಿಕನ್ ಇಂಡಿಯನ್ ಅಭಿಜಿತ್ ಬ್ಯಾನರ್ಜಿ ಮೊದಲು ಮದುವೆಯಾದದ್ದು ಎಂಐಟಿ ಯಲ್ಲಿ ಸಾಹಿತ್ಯದ ಪ್ರೊಫೆಸರ್ ಆಗಿದ್ದ ಅರುಂಧತಿ ತುಲಿ ಅವರನ್ನು. ಡೈವೋರ್ಸ್ ಆದ ಬಳಿಕ 2015ರಲ್ಲಿ ಎಸ್ತರ್‌ರನ್ನು ಮದುವೆಯಾದರು. ಮೊದಲ ಪತ್ನಿಯ ಏಕೈಕ ಮಗ ಕಬೀರ್ ಬ್ಯಾನರ್ಜಿ 25ರ ಹರೆಯದಲ್ಲಿ ಅಪಘಾತದಲ್ಲಿ ಸಾವನ್ನಪ್ಪಿದ. ಈಗಿನ ಪತ್ನಿಯಿಂದ ಇಬ್ಬರು ಮಕ್ಕಳಿದ್ದಾರೆ.

ಹಾರ್ವರ್ಡ್ ಯುನಿವರ್ಸಿಟಿಯಲ್ಲಿ ಪಿಎಚ್‌ಡಿ ಮಾಡಿರುವ ಅಭಿಜಿತ್ ಬರೆದಿರುವ ಪುಸ್ತಕಗಳ ಸಂಖ್ಯೆ ಹತ್ತಕ್ಕೂ ಹೆಚ್ಚಿದೆ. 'ಪೂರ್ ಎಕನಾಮಿಕ್ಸ್' ಎನ್ನುವ ಜನಪ್ರಿಯ ಪುಸ್ತಕದ ಸಹಲೇಖಕ. ಇವರು ಪಡೆದಿರುವ ಫೆಲೋಷಿಪ್‌ಗಳಿಗಂತೂ ಲೆಕ್ಕವಿಲ್ಲ. ಇತ್ತೀಚೆಗೆ ಪತ್ನಿಯ ಜೊತೆ ಸೇರಿ ಬರೆದ ಪುಸ್ತಕ 'ಗುಡ್ ಎಕನಾಮಿಕ್ಸ್ ಫಾರ್ ಹಾರ್ಡ್ ಟೈಮ್ಸ್' ಬಿಡುಗಡೆಯಾದ ಬೆನ್ನಲ್ಲೇ ನೊಬೆಲ್ ಪ್ರಶಸ್ತಿ ಅರಸಿಕೊಂಡು ಬಂದಿದೆ. ಬಾಲ್ಯದಿಂದಲೂ ಸ್ವಭಾವತಃ ತಾಳ್ಮೆಯ ಪ್ರತಿರೂಪದಂತಿರುವ ಅಭಿಜಿತ್, ನೊಬೆಲ್ ಗೆದ್ದ ಬಳಿಕ ಪ್ರಧಾನಿ ಮೋದಿಯವರನ್ನು ಭೇಟಿಯಾಗಿದ್ದಾರೆ. ಈ ಭೇಟಿಯಿಂದ, ಭಾರತದ ಕುಸಿಯುತ್ತಿರುವ ಆರ್ಥಿಕತೆಗೆ ಪುನಶ್ಚೇತನ ಸಿಗಬಹುದೆ?



■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65